ಖಾಯಂ ಆಗದೇ ಇರಲು ಕಾರಣ ಏನು? ಸದರಿಯವರ ದಂಡಿತಕ್ಕೆ ಬೆಲೆ ಇಲ್ಲವೆ? ರಾಜ್ಯದಲ್ಲಿ ಎಲ್ಲಾ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ದಿನಗೂಲಿ ಹಾಗೂ ಸ್ಥಳೀಯ ನೌಕರರನ್ನು ಖಾಯಂಗೊಳಿಸಿದಂತೆ ಇವರನ್ನು ಖಾಯಂಗೊಳಿಸದಿರಲು ಕಾರಣವೇನು? ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಎತ್ತಿರುವ ವಿಷಯದ ಬಗ್ಗೆ ಈಗಾಗಲೇ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಕರ್ನಾಟಕ ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸುಮಾರು ೩೭೧ ಜನರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಆದರೆ, ಇದು ಮೀಸಲಾತಿಗೆ ವಿರುದ್ಧವಾಗಿದೆ. ಅಲ್ಲದೆ ಕೆಲವು ಹುದ್ದೆಗಳು ಖಾಲಿ ಇಲ್ಲದೇ ಇದ್ದರೂ ನೇಮಕಗಳನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ತೀವ್ರವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

10 ಹೊನ್ನಾವರ ತಾಲ್ಲೂಕಿನಲ್ಲಿರುವ ಸೇವಾ ಸಹಕಾರ ಸಂಘಗಳನ್ನು ಉಚ್ಚ ನ್ಯಾಯಾಲಯದ ಆದೇಶದಂತೆ ಸಂಯೋಜಿಸುವುದು.

ಶ್ರೀ ಆರ್. ಎನ್. ನಾಯಕ್.—ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿರುವ

(೧) ಕರಿಕಾನ ಪರಮೇಶ್ವರಿ ಸೇವಾ ಸಹಕಾರ ಸಂಘ, ಸಾಲಕೋಡು

(೨) ವ್ಯವಸಾಯ ಸೇವಾ ಸಹಕಾರಿ ಸಂಘ, ಹೊಸಾಕುಳಿ

(೩) ವ್ಯವಸಾಯ ಸೇವಾ ಸಹಕಾರಿ ಸಂಘ, ಮುಗವಾ

(೪) ವ್ಯವಸಾಯ ಸೇವಾ ಸಹಕಾರಿ ಸಂಘ, ಹೆಬ್ಬಾನಕೇರಿ, ಇವುಗಳನ್ನು ಸಂಯೋಜಿಸಿ ಒಂದೇ ಸೇವಾ ಸಹಕಾರಿ ಸಂಘವನ್ನಾಗಿ ಪರಿವರ್ತಿಸಬೇಕೆಂದು ಹಿಂದೆ ಸರಕಾರ ಆದೇಶಿಸಿತ್ತು. ಸದರಿ ಆದೇಶದ ವಿರುದ್ಧ ಸಂಘಗಳವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ, ಅರ್ಜಿಯೂ ಸಹ ತೀರ್ಪಾನವಾಗಿ, ಸರಕಾರಿ ಆದೇಶವನ್ನು ಹೈಕೋರ್ಟು ಎತ್ತಿ ಹಿಡಿದ ಆದೇಶ ಬಂದು ಬಹಳ ದಿನಗಳು ಕಳೆದವು. ಆದರೂ ಸಹ, ಸಂಬಂಧಪಟ್ಟ ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಒಳಗಾಗಿ ಮೇಲೆ ಹೇಳಿದ ಸಹಕಾರಿ ಸಂಘಗಳನ್ನು ಸಂಯೋಜಿಸದೆ ಹಾಗೆಯೇ ಉಳಿಸಿದ್ದಾರೆ. ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವ ಬಗ್ಗೆ ಹಾಗೂ ಸರಕಾರಿ ಆಜ್ಞೆಯನ್ನು ಜಾರಿಗೊಳಿಸದೇ ಇರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ.— ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗಿ ಮೇಲೆ ಹೇಳಿದ ಸಹಕಾರಿ ಸಂಘಗಳನ್ನು ಸಂಯೋಜಿಸದೆ ಹಾಗೆಯೇ ಬಿಟ್ಟಿಲ್ಲ. ಕೆಲವೊಂದು ಮನವಿಗಳು ಬಂದಿವೆ, ಅವೆಗಳನ್ನು ಪರಿಶೀಲಿಸುತ್ತಿದ್ದೇವೆ. ಆದಷ್ಟು ತೀವ್ರವಾಗಿ ತೀರ್ಮಾನ ತೆಗೆದುಕೊಂಡು ಸೂಕ್ತ ನಿರ್ದೇಶನ ಕೊಡುತ್ತೇನೆ.

11 ಹೊಸದುರ್ಗ ಕ್ಷೇತ್ರದ ಯಲ್ಲಾಬೋವಿಹಟ್ಟಿ ಕಾಲೋನಿಯಲ್ಲಿ ಬೆಂಕಿ ಅನಾಹುತವಾಗಿರುವುದರಿಂದ ಪರಿಹಾರಕ್ಕಾಗಿ ಮನವಿ.—

ಶ್ರೀ ಜಿ. ರಾಮದಾಸ್.—ಹೊಸದುರ್ಗ ಕ್ಷೇತ್ರ ವ್ಯಾಪ್ತಿದಕೆರೆ ಹೋಬಳಿ, ಯಲ್ಲಾಬೋವಿಹಟ್ಟಿ ಕಾಲೋನಿಯಲ್ಲಿ ಸುಮಾರು ೨೦೦ ಕುಟುಂಬಗಳು ವಾಸ ಮಾಡುತ್ತಾ ಇದ್ದಾರೆ. ಇಲ್ಲಿ ವಾಸ ಮಾಡುವ ಜನಗಳೆಲ್ಲಾ ಪರಿಶಿಷ್ಟ ವರ್ಗದವರು ಸದರಿ ಕಾಲೋನಿಯಲ್ಲಿ ೮ ದಿವಸಗಳ ಹಿಂದೆ, ಸುಮಾರು ೩೦ ಕುಟುಂಬದ ರಾಗಿ ಹುಲ್ಲು ಬಣವೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಸಂಪೂರ್ಣವಾಗಿ ಭಸ್ಮವಾಗಿ ಹೋಗಿವೆ. ಈ ಕಾರಣದಿಂದ ಈ ಬಡ ಜನಗಳು ಬಹಳ ತೊಂದರೆಗೀಡಾಗಿದ್ದಾರೆ. ಇವರಿಗೆ ತಕ್ಷಣ ಯಾವ ಪರಿಹಾರವೂ ಸಿಕ್ಕಿಲ್ಲ. ದಯವಾಡಿ ಸರ್ಕಾರ ಕ್ರಮ ತೆಗೆದುಕೊಂಡು ಕೂಡಲೇ ಬಡವರಿಗೆ ಸಹಾಯ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.